ಕಾಳೀಹುಂಡಿ ಶಿವಕುಮಾರ್, ಮೈಸೂರು
ನವರಸ ಇಲ್ಲದ ಜೀವನವದು ಮರಣ ಎನ್ನುತ್ತಾನಲ್ಲ?




ಮರಣದಲ್ಲಿಯೂ ಶೋಕರಸ, ಭೀಭತ್ಸಗಳಿವೆಯಲ್ಲ!

ಸಿ. ಆನಂದಪ್ಪ, ಬೆಂಗಳೂರು
ಪ್ರತಿಯೊಬ್ಬ ತಾಯಿ ತನಗೆ ಕೃಷ್ಣನಂತಹ ಮಗು ಬೇಕು ಎಂದು ಅಪೇಕ್ಷಿಸುವುದು ಏಕೆ?
ಜೈಲಲ್ಲುಟ್ಟಿದ್ರೂ ಜೈ ಅನ್ನಿಸ್ಕೊಳೋ ಮಟ್ಟಕ್ಕೆ ಬೆಳೆದನಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು
ಮೋಡ ಬಿತ್ತನೆಗೂ, ಕಪ್ಪೆ ಮದುವೆಗೂ ಏನು ವ್ಯತ್ಯಾಸ?
ಅದು ಮೋಡಕ್ಕೆ ಉಪ್ಪು; ಇದು ಕಂದಾಚಾರಕ್ಕೆ ಸೊಪ್ಪು.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
ಜಯದ ಮೊದಲ ಮೆಟ್ಟಿಲು ಯಾವುದು?
ಜಾರದ ಸಂಕಲ್ಪ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಮೋಡ ಬಿತ್ತನೆ ಅಂತಾರಲ್ಲ, ಮೋಡ ಅನ್ನೋದೇನು ಬೀಜವೆ?



ಬೀಜವೇ! ಬೀ ಬೀಳುತ್ತಲೇ; ಜ ಜಲ.

ನಾಜ್ಯೋತಿ, ಹೂವಿನಹಡಗಲಿ
ಚಾತುರ್ವರ್ಣಗಳಲ್ಲಿಯೇ ಸಾಗಿ ಬಂದ ಅಸಹಿಷ್ಣುತೆಯಿಂದ ತ್ರಿವರ್ಣಕ್ಕೆ (ದೇಶಕ್ಕೆ) ಮುಕ್ತಿ ಎಂದು ಗುರೂಜಿ?
ಅಸಹಿಷ್ಣುತೆ ಇರುವುದು ಶ್ರೀಸಾಮಾನ್ಯರಲ್ಲಲ್ಲ, ಅವರನ್ನು ವಿಭಜಿಸುವವರಲ್ಲಿ ಎಂದು ತಿಳಿದಂದು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
'ಮೈತ್ರಿ', 'ಸಮ್ಮಿಶ್ರ' ಪದಗಳಿಗೆ ನಿಮ್ಮ ನಿಘಂಟಿನಲ್ಲಿರುವ ಅರ್ಥ ಏನು?
'ನಾನು, ಮಗ, ಮೊಮ್ಮಗ' ಎಂಬುದೇ ಮೈ 3. sum ಗಾಗಿ ಮಿಶ್ರವಾಗುವುದೇ ಸಮ್ಮಿಶ್ರ.

ಮಹಾವೀರ ಕಾಸರ, ಶಿವಮೊಗ್ಗ
ರಾಶಿ ರಾಶಿ ಬಟ್ಟೆ ಹಾಕಿಸಿ ಆರಂಭದಲ್ಲಿ ತೋರಿಸಿದ್ದನ್ನು ಆಯ್ಕೆ ಮಾಡಿಕೊಳ್ಳುವರಲ್ಲಾ...?
ಮ್ಯಾರೇಜ್ ನಿಯಮ; ನೋಡಿದ್ದನ್ನೇ ನೋಡುತ್ತಿದ್ದರೆ ಕುರೂಪವೂ ಸಹ್ಯವಾಗಿ, ಇಷ್ಟವಾಗುತ್ತದೆ.

ಗಣಪತಿ ಕಂಚಿಪಾಲ, ತೆಲಂಗಾರ
ಬಾಗಿಲಲ್ಲಿ ಹಿಡಿಯದ ಲಕ್ಷ್ಮಿಯನ್ನು ಒಳತರೋದು ಹೇಗೆ?
ಚೇಂಜ್ ಮಾಡಿಸಿಕೊಂಡು.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಇದ್ದಕ್ಕಿದ್ದಂತೆ ಭುಗಿಲೆದ್ದ ಮೀಟೂ ವಿವಾದ ಏಕಾಏಕಿ ತಣ್ಣಗಾಗಿದೆಯೆ?
ಮೀಟೂ ಉಪಯುಕ್ತವೆನಿಸಿದಾಗ ಕೆದಕಿ ಗಾಳಿಯೂದಿದರೆ ಕೆಂಡ ನಿಗಿನಿಗಿಸುವ ಇದ್ದಿಲ ಒಲೆ.

ವಿ. ಹಮೀದ್, ವಿಟ್ಲ
ಇಲ್ಲೊಬ್ಬಳು ಒಂದೇ ರಾತ್ರಿಯ ಲವ್ವರ್ ಆಗಿರೋಣ ಎಂದು ಕಾಲ್ ಮಾಡಿದ್ದಾಳೆ. ಏನು ಮಾಡಲಿ?
ಈ ಪ್ರಶ್ನೆಯನ್ನು ನಿಮ್ಮ ಹೆಂಡತಿಗೆ ಫಾರ್ವರ್ಡ್ ಮಾಡಿದ್ದೇನೆ. ನಿಮ್ಮ ಆತ್ಮಕ್ಕೆ ಶಾಂತಿ ಸಿಗಲಿ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಕೂತು ಉಂಡರೆ ಕುಡಿಕೆ ಹೊನ್ನು ಸಾಲದು. ನಿಂತು ಉಂಡರೆ?
ದರ್ಶಿನಿ ಹೋಟೆಲ್‌ಗಳ ಉದ್ಧಾರವಾಗುವುದು.

ರವಿಕಾಂತ ಎಂ.ಕೆ. ತುಮಕೂರು
ಕೈಕಾಲಿಗೆ ಬಲ ಕೊಡುವ ಕಡಿಮೆ ಬೆಲೆಯ ಹಾಲನ್ನು ಬಿಟ್ಟು ಮದ್ಯಕ್ಕೆ ಮುತ್ತುವ ಮಂದಿಗೆ ತಮ್ಮ ಸಲಹೆ?
ಮದ್ಯಕ್ಕೋದಾಯಸ್ಸು ಮಾತ್ರೆ ಮುಕ್ಕಿದ್ರೂ ಮರಳಲ್ಲ.

ಅಮರಯ್ಯಾ ಪತ್ರಿಮಠ, ಸುರಪುರ
ನಮ್ಮ ಜೀವನದ ಸ್ವಾರಸ್ಯ ಯಾವುದರಲ್ಲಿ ಅಡಗಿದೆ?
ಕುತೂಹಲ, ನಿರೀಕ್ಷೆಗಳಲ್ಲಿ.

## ಬಹುಮಾನಿತ ಪ್ರಶ್ನೆ

ರವಿ ಎಂ. ಪೈ, ಹೊನ್ನಾವರ
ಮನುಷ್ಯರನ್ನು ಜಾತಿ, ಧರ್ಮದಡಿ ವಿಂಗಡಿಸುವುದೇಕೆ?
ನಮ್ಮ ಮನೋವಿಕಾಸ ಇನ್ನೂ ಬುಲ್‌ಡಾಗ್, ಪೊಮೇರಿಯನ್‌ಗಳ ಮಟ್ಟದಲ್ಲೇ ಇದೆಯೆಂದು ಸೂಚಿಸಲು.

ಶ್ರೀನಿವಾಸ ಪದಕಿ, ಮುಂಬಯಿ
ಮಡದಿಯನ್ನು ಮೆಚ್ಚಿಸಲು ಏನು ಮಾಡಬೇಕು?
ಅವಳು ಹೇಳಿದ್ದನ್ನೆಲ್ಲಾ... ಚಾಚೂ ತಪ್ಪದೆ.

ಕೆ.ವಿ. ಗೋವಿಂದಾಚಾರಿ, ಮೈಸೂರು
ತಮಿಳ್ನಾಡಿನವರು ತಮ್ಮ ನಾಯಕರನ್ನು ಅಣ್ಣ, ಅಮ್ಮ, ಅಯ್ಯ ಎಂದು ಕರೆದರು. ಮುಂದೇನು ಕರೆಯುತ್ತಾರೆ?
ಅಣ್ಣಮ್ಮಯ್ಯಗಳು ಕೊಟ್ಟ ತೊಂದರೆಗಳನ್ನು ನೋಡಿದರೆ, ಅಮ್ಮಮ್ಮ, ಅಯ್ಯಯ್ಯ ಎಂದು ಕರೆಯಬಹುದು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ನಿಜವಾದ ಕನ್ನಡ ಅಭಿಮಾನ ಹೇಗಿರಬೇಕು?



ಮನ ಅರಳಿಸುವ ಎಳೆಬಿಸಿಲಿನ ಕಿರಣದಂತೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಹೆಂಡತಿ ಗಂಡನ ಎಡಗಡೆ ನಿಲ್ಲುತ್ತಾಳೆ. ಯಾಕೆ?
ಹಾರಿಸಿಕೊಂಡುಹೋಗುತ್ತಿದ್ದ ಕಾಲದ ಪದ್ಧತಿ; ಬಲಗೈಲಿ ಕುದುರೆ, ಎಡಗೈಲಿ ಚದುರೆ!

ವಿ. ಹೇಮಂತಕುಮಾರ್, ಬೆಂಗಳೂರು
ಕೆಲವು ಹುಡುಗರು ಹುಡುಗಿಯರನ್ನು ಕಂಡ ಕೂಡಲೆ ತಲೆ ಬಾಚಿಕೊಳ್ಳುತ್ತಾರಲ್ಲ, ಏಕೆ ಸಾರ್?
ಅವರನ್ನೇ ಬಾಚಿಕೊಂಡರೆ ಪೊಲೀಸ್ ಕೇಸ್ ಆಗಿ ಮೂಳೆ ಮುರಿಯುವುದರಿಂದ.

■ ರಾಮ್